# KSEAB. SSLC ಮಾದರಿ ಪ್ರಶ್ನೆಪತ್ರಿಕೆ 2022-23

ಸಮಯ: 3 ಗಂಟೆ 15 ನಿಮಿಷಗಳು ವಿಷಯ : ಸಮಾಜ ವಿಜ್ಞಾನ ಗರಿಷ್ಠ ಅಂಕಗಳು : 80

**I** ಪ್ರತಿ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅದನ್ನು ಪೂರ್ಣಗೊಳಿಸಲು ಸರಿಯಾದ ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ನಿಮ್ಮ ಉತ್ತರ ಪತ್ರಿಕೆಯಲ್ಲಿ ಬರೆಯಿರಿ. **8x1=8**

1. ಭಾರತದಲ್ಲಿ ಮೊದಲ ಭಾಷಾವಾರು ರಾಜ್ಯವಾಗಿ ರಚನೆಗೊಂಡ ರಾಜ್ಯ

A) ಮೈಸೂರು ರಾಜ್ಯ B) ಆಂಧ್ರ ಪ್ರದೇಶ
C) ಸೌರಾಷ್ಟ್ರ D) ಉತ್ತರ ಪ್ರದೇಶ

ಉತ್ತರ:- B) ಆಂಧ್ರ ಪ್ರದೇಶ

2. ಮೊದಲನೇ (ವಿಶ್ವ ಸಮರಕ್ಕೆ) ಮಹಾಯುದ್ಧಕ್ಕೆ ತಕ್ಷಣದ ಕಾರಣ

A) ಕದನ ಬಾಂಧವ್ಯ ತ್ರಯ ಮತ್ತು ಕದನ ಸೌಹಾರ್ದ ತ್ರಯ ರಚನೆ B) ಅಮೇರಿಕ ಅನುಸರಿಸಿದ ತಟಸ್ಥ ನೀತಿ
C) ಅವಮಾನಕಾರಿಯಾದ ವರ್ಸೇಲ್ಸ್ ಒಪ್ಪಂದ D) ಆರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆ

ಉತ್ತರ:- D) ಆರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆ

3. ನಮ್ಮ ಸಂವಿಧಾನದ 21ಎ ವಿಧಿ ಸೂಚಿಸುವುದು

A) ಧಾರ್ಮಿಕ ಮೂಲಭೂತ ಹಕ್ಕು B) ಶೋಷಣೆಯ ವಿರುದ್ಧದ ಮೂಲಭೂತ ಹಕ್ಕು
C) ಸಂವಿಧಾನಾತ್ಮಕ ಪರಿಹಾರದ ಮೂಲಭೂತ ಹಕ್ಕು D) ಶೈಕ್ಷಣಿಕ ಮೂಲಭೂತ ಹಕ್ಕು

ಉತ್ತರ:- D) ಶೈಕ್ಷಣಿಕ ಮೂಲಭೂತ ಹಕ್ಕು

4. ಕೂಲಿ ರಹಿತ ದುಡಿಮೆಗೆ ಉತ್ತಮ ಉದಾಹರಣೆ

A) ಜೀತದಾಳು B) ಕೃಷಿ ಕಾರ್ಮಿಕ C) ಗೃಹಿಣಿ D) ಕೈತೋಟಗಾರ

ಉತ್ತರ:- C) ಗೃಹಿಣಿ

5. ಸಾಂಪ್ರದಾಯಿಕ ಶಕ್ತಿಸಂಪನ್ಮೂಲಕ್ಕೆ ಒಂದು ಉದಾಹರಣೆ

A) ಪವನ ಶಕ್ತಿ B) ಸ್ವಾಭಾವಿಕ ಅನಿಲ C) ಸೌರ ಶಕ್ತಿ D) ಜಲವಿದ್ಯುತ್ ಶಕ್ತಿ

ಉತ್ತರ:- B) ಸ್ವಾಭಾವಿಕ ಅನಿಲ

6. ಭಾರತದ ಚಹಾ ಬಂದರು

A) ನವ ಮಂಗಳೂರು B) ಹಾಲ್ದಿಯಾ C) ಪಾರಾದೀಪ್ D) ಕೊಲ್ಕತ್ತಾ

ಉತ್ತರ:- D) ಕೊಲ್ಕತ್ತಾ

7. ಜಿಲ್ಲಾ ಕೈಗಾರಿಕಾ ಕೇಂದ್ರ ಸ್ಥಾಪನೆಯಾದ ವರ್ಷ

A) 1968 B) 1978 C) 1988 D) 1998

ಉತ್ತರ:- B) 1978

8. ಭಾರತದ ಹಸಿರು ಕ್ರಾಂತಿಯ ಪಿತಾಮಹ

A) ಡಾ. ನಾರ್ಮನ್ ಬೋರ್‌ಲಾಗ್ B) ಕಿರಣ್ ಮಜುಮ್‌ದಾರ್ ಷಾ
C) ಡಾ. ಎಂ.ಎಸ್. ಸ್ವಾಮಿನಾಥನ್ D) ವರ್ಗೀಸ್ ಕುರಿಯನ್

ಉತ್ತರ:- C) ಡಾ. ಎಂ.ಎಸ್. ಸ್ವಾಮಿನಾಥನ್

**II** ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ. **8x1=8**

9. ಸರದಾರ್ ವಲ್ಲಭ್ ಭಾಯ್ ಪಟೇಲರನ್ನು ಭಾರತದ ಉಕ್ಕಿನ ಮನುಷ್ಯ ಎಂದು ಏಕೆ ಕರೆಯುತ್ತಾರೆ?

ಉತ್ತರ:- ಭಾರತದ ದೇಶೀಯ ಸಂಸ್ಥಾನಗಳನ್ನು ವಿಲೀನಗೊಳಿಸುವ ಕಾರ್ಯಭಾರವನ್ನು ಯಶಸ್ವಿಗೊಳಿಸಿ ಕಾರಣ.

10. ದೆಹಲಿಯ ತೀನ್ ಮೂರ್ತಿ ಭವನದ ಪ್ರಾಮುಖ್ಯತೆ ಏನು?

ಉತ್ತರ:-ಮೊದಲನೆಯ ಮಹಾಯುದ್ಧದಲ್ಲಿ ಬ್ರಿಟಿಷರಿಗೆ ನೆರವು ನೀಡಿದ ಮೂರು ಶಿಲ್ಪಗಳು ಅಂದರೆ ಮೈಸೂರು, ಜೋಧಪುರ, ಮತ್ತು ಹೈದರಾಬಾದ್ ಸೈನಿಕರ ಸ್ಮರಣಾರ್ಥ ಬ್ರಿಟಿಷರು ತೀನ್ ಮೂರ್ತಿ ಭವನ ನಿರ್ಮಿಸಿದರು.

11. ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯಬೇಕೆಂದು ಪ್ರತಿಪಾದಿಸುತ್ತಿರುವ ದೇಶ ಯಾವುದು?

ಉತ್ತರ:- ರಷ್ಯಾ

12. ಪ್ರಸವ ಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆಯನ್ನು ಏಕೆ ಜಾರಿಗೆ ತರಲಾಯಿತು?

ಉತ್ತರ:-ಆಧುನಿಕ ತಂತ್ರಜ್ಞಾನದ ಮೂಲಕ ಗರ್ಭದಲ್ಲಿರುವ ಲಿಂಗ ಪತ್ತೆ ಹಚ್ಚುವುದನ್ನು ನಿಯಂತ್ರಿಸಲು ಹಾಗೂ ಹೆಣ್ಣು ಭ್ರೂಣಹತ್ಯೆಗಳನ್ನು ನಿಯಂತ್ರಿಸಲು.

13. ವರದಕ್ಷಿಣೆ ಎಂದರೇನು?

ಉತ್ತರ:-ವಿವಾಹದ ಉಡುಗೊರೆಯಾಗಿ ವಧುವಿನ ಕುಟುಂಬದವರಿಂದ ವರನ ಕುಟುಂಬದವರು ಪಡೆಯುವ ಸ್ವತ್ತು, ಚಿನ್ನಾಭರಣ, ನಗದು ಅಥವಾ ವಾಹನ ಇತ್ಯಾದಿಗಳನ್ನು ವರದಕ್ಷಿಣೆ ಎನ್ನುವರು.

14. ತೀರದುದ್ದಕ್ಕೂ ಮ್ಯಾಂಗ್ರೂವ್ ಅರಣ್ಯಗಳನ್ನು ಏಕೆ ಬೆಳೆಯಬೇಕು?

ಉತ್ತರ:-ಕಡಲಕೊರೆತವನ್ನು ನಿಯಂತ್ರಿಸಲು.

15. ಆಯವ್ಯಯ ಎಂದರೇನು?

ಉತ್ತರ:-ಸರ್ಕಾರದ ಒಂದು ವರ್ಷದ ಆದಾಯ ಮತ್ತು ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿ.

16. ಮಾರುತಿಯು ವಿದೇಶಿ ಪ್ರವಾಸ ಕೈಗೊಳ್ಳಲು ಯೋಜಿಸಿದ್ದಾನೆ. ಅವನ ಅನುಪಸ್ಥಿತಿಯಲ್ಲಿ ತನ್ನ ಎಲ್ಲಾ ಒಡವೆಗಳನ್ನು ಸಂರಕ್ಷಿಸಲು ಬ್ಯಾಂಕಿನಿಂದ ಯಾವ ಸೇವೆ ಪಡೆಯಬಹುದು?

ಉತ್ತರ:-ಬ್ಯಾಂಕಿನಿಂದ ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಪಡೆಯುವುದು

**III ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ / ಅಂಶಗಳಲ್ಲಿ ಉತ್ತರಿಸಿರಿ. 8x2=16**

17.19ನೇ ಶತಮಾನದಲ್ಲಿ ಸಾಮಾಜಿಕ-ಧಾರ್ಮಿಕ ಸುಧಾರಣೆಗಳನ್ನು ತಂದ ಸಂಘಗಳನ್ನು ಹೆಸರಿಸಿ.

1) ಬ್ರಹ್ಮ ಸಮಾಜ 2) ಆರ್ಯ ಸಮಾಜ 3) ಪ್ರಾರ್ಥನಾ ಸಮಾಜ
4) ಸತ್ಯ ಶೋಧಕ ಸಮಾಜ 4) ರಾಮಕೃಷ್ಣ ಮಿಷನ್ 6) ಆಲಿಘರ್ ಚಳವಳಿ

18. ಭಾರತದ ಪ್ರಥಮ ಸ್ವಾತಂತ್ರ ಸಂಗ್ರಾಮದ ಪರಿಣಾಮಗಳೇನು?

❖ ಭಾರತದಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಗೊಂಡಿತು. ಬ್ರಿಟನ್ ಸಾಮ್ರಾಜ್ಞಿಗೆ ಆಡಳಿತ ವರ್ಗಾವಣೆಯಾಯಿತು.
❖ ಭಾರತದ ವ್ಯವಹಾರವನ್ನು ಬ್ರಿಟಿಷ್ ಪಾರ್ಲಿಮೆಂಟಿನ ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ಒಪ್ಪಿಸಲಾಯಿತು.
❖ ಹಿಂದೆ ಕಂಪನಿಯು ದೇಶಿ ರಾಜರೊಂದಿಗೆ ಮಾಡಿ ಕೊಂಡಿದ್ದ ಒಪ್ಪಂದವನ್ನು ಅಂಗೀಕರಿಸ ಲಾಯಿತು
❖ ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈ ಬಿಡಲಾಯಿತು ಹಾಗೂ ಭಾರತೀಯರಿಗೆ ಸುಭದ್ರ ಸರ್ಕಾರ ನೀಡುವ ಭರವಸೆಯನ್ನು ಬ್ರಿಟಿಷರು ನೀಡಿದರು
❖ ಕಾನೂನಿನ ಮುಂದೆ ಸಮಾನತೆ ಹಾಗೂ ಭಾರತೀಯರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂಬ ಭರವಸೆಯನ್ನು ಬ್ರಿಟಿಷರು ನೀಡಿದರು

19. ಪ್ರಾಂತೀಯತೆ ಸಮಸ್ಯೆಯನ್ನು ಬಗೆಹರಿಸಲು ಕೈಗೊಂಡಿರುವ ಕ್ರಮಗಳನ್ನು ಪಟ್ಟಿಮಾಡಿ.

❖ ಏಕ ಪೌರತ್ವ ಜಾರಿಗೆ ತರಲಾಗಿದೆ
❖ ನಮ್ಮ ಸಂವಿಧಾನವು ರಾಷ್ಟ್ರದ ಸಮಗ್ರತೆ ಹಾಗೂ ಏಕತೆಯನ್ನು ಎತ್ತಿ ಹಿಡಿದಿದೆ.
❖ ಸಂಯುಕ್ತ ರಾಜ್ಯ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ.
❖ ನಮ್ಮ ಸಂವಿಧಾನದ ಪ್ರಸ್ತಾವನೆಯು "ಭಾರತದ ಪ್ರಜೆಗಳಾದ ನಾವು" ಎಂಬ ಒಕ್ಕಣೆಯು ಭಾರತದ ರಾಷ್ಟ್ರೀಯತೆಯನ್ನು ಬಿಂಬಿಸುತ್ತದೆ.

ಅಥವಾ

ಭಯೋತ್ಪಾದಕತೆ ನಿಗ್ರಹಕ್ಕೆ ಕೈಗೊಂಡಿರುವ ಕ್ರಮಗಳನ್ನು ಪಟ್ಟಿಮಾಡಿ.

- ಭಾರತ ತನ್ನಲ್ಲಿ ಮತ್ತು ಅನ್ಯರ ನೆಲದಲ್ಲಿ ನಡೆಯುವ ಭಯೋತ್ಪಾದಕತೆಯನ್ನು ತೀವ್ರವಾಗಿ ವಿರೋಧಿಸುತ್ತದೆ
- ಭಯೋತ್ಪಾದಕ ನಿಗ್ರಹ ದಳದ ರಚನೆ
- ರಕ್ಷಣಾ ಪಡೆಗಳನ್ನು ಉಗ್ರಗಾಮಿಗಳ ವಿರುದ್ಧ ಕಾರ್ಯಚರಣೆಗೆ ಬಳಸಲಾಗುತ್ತದೆ.
- ಶಾಂತಿ ಪ್ರಿಯವಾದ ಭಾರತ ಭಯೋತ್ಪಾದಕತೆಯನ್ನು ವಿರೋಧಿಸುತ್ತದೆ.

20. ಅಸ್ಪೃಶ್ಯತೆ ತೊಡೆದುಹಾಕಲು ಕಾನೂನಾತ್ಮಕ ಕ್ರಮಗಳು ಯಾವುವು?

- ಸಂವಿಧಾನದ 17ನೆಯ ವಿಧಿಯು ಅಸ್ಪೃಶ್ಯತಾ ಆಚರಣೆ ಯನ್ನು ನಿಷೇಧಿಸಿದೆ.
- ಭಾರತ ಸರ್ಕಾರವು 'ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ' ಯನ್ನು 1955 ರಲ್ಲಿ ಜಾರಿಗೊಳಿಸಿದೆ.

- 'ನಾಗರೀಕ ಹಕ್ಕುಗಳ ಸಂರಕ್ಷಣಾ ಕಾಯ್ದೆ' ಯನ್ನು 1976 ರಲ್ಲಿ ಜಾರಿಗೊಳಿಸಿದೆ.
- ಸಂವಿಧಾನಾತ್ಮಕವಾಗಿ ಸಾರ್ವತ್ರಿಕ ಮತದಾನದ ಹಕ್ಕನ್ನು ನೀಡಿದೆ.
- ಸಮಾನತೆಯ ಹಕ್ಕನ್ನು ದೇಶದ ಎಲ್ಲಾ ನಾಗರೀಕರಿಗೂ ನೀಡಿದೆ.
- ವಿಶೇಷವಾಗಿ ಪರಿಶಿಷ್ಟರನ್ನೊಳಗೊಂಡಂತೆ ಹಿಂದುಳಿದ ಜಾತಿಯವರಿಗೆ ಶೈಕ್ಷಣಿಕ, ರಾಜಕೀಯ, ಆರ್ಥಿಕ ಮತ್ತು ಉದ್ಯೋಗವಕಾಶಗಳಲ್ಲಿ ಮೀಸಲಾತಿಗಳನ್ನು ಕಲ್ಪಿಸಿದೆ.

**ಅಥವಾ**

ಗ್ರಾಮೀಣ ಸ್ತ್ರೀಯರು ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಸಹಕಾರಿಯಾಗಿರುವ ಕಾರ್ಯಕ್ರಮಗಳು ಯಾವುವು?

- ❖ ಮಹಿಳಾ ಸ್ವಸಹಾಯ ಸಂಘ
- ❖ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಯ ಸ್ಥಾಪನೆ
- ❖ ಸ್ತ್ರೀ ಶಕ್ತಿ ಸಂಘಗಳು
- ❖ ಮಹಿಳಾ ಮಂಡಲಗಳು
- ❖ ಯುವತಿ ಮಂಡಲಗಳು
- ❖ ಮಹಿಳಾ ಸಹಕಾರಿ ಸಂಘಗಳು

21. ಭಾರತದ ಋತುಗಳನ್ನು ಅವುಗಳ ತಿಂಗಳುಗಳೊಂದಿಗೆ ಹೆಸರಿಸಿ.

- ಚಳಿಗಾಲ (ಡಿಸೆಂಬರ್-ಫೆಬ್ರವರಿ)
- ಬೇಸಿಗೆ ಕಾಲ (ಮಾರ್ಚ್-ಮೇ)
- ನೈಋತ್ಯ ಮಾನ್ಸೂನ್ ಕಾಲ ಅಥವಾ ಮುಂಗಾರು ಕಾಲ (ಜೂನ್-ಸೆಪ್ಟೆಂಬರ್)
- ಮಾನ್ಸೂನ್ ಮಾರುತಗಳ ನಿರ್ಗಮನಕಾಲ ಅಥವಾ ಹಿಂಗಾರು ಮಳೆಗಾಲ (ಅಕ್ಟೋಬರ್-ನವೆಂಬರ್)

22. ರಾಷ್ಟ್ರೀಯ ವಿದ್ಯುತ್ ಜಾಲ ಹೇಗೆ ಸಹಕಾರಿಯಾಗಿದೆ?

ಎಲ್ಲಾ ರಾಜ್ಯಗಳಲ್ಲಿ ವರ್ಷದ ಎಲ್ಲ ಅವಧಿಯಲ್ಲಿಯೂ ಹೆಚ್ಚು ವಿದ್ಯುತ್ ಉತ್ಪಾದನೆ ಇರುವುದಿಲ್ಲ, ಹೆಚ್ಚುವರಿ ವಿದ್ಯುತ್ತನ್ನು ಕೊರತೆಯಿರುವ ಪ್ರದೇಶಗಳಿಗೆ ಸಾಗಿಸಲು ಹಾಗೂ ವಿದ್ಯುತ್ತನ್ನು ಸಮರ್ಪಕವಾಗಿ ಪ್ರಸರಣ ಮಾಡಲು ರಾಷ್ಟ್ರೀಯ ವಿದ್ಯುತ್ ಜಾಲವನ್ನು ನಿರ್ಮಿಸಲಾಗಿದೆ. ಇದರಿಂದ ಹೆಚ್ಚುವರಿ ವಿದ್ಯುತ್ ಇರುವ ಪ್ರದೇಶದಿಂದ ಕೊರತೆ ಇರುವ ಪ್ರದೇಶಗಳಿಗೆ ಪೂರೈಸ ಬಹುದಾಗಿದೆ.

23. ಭಾರತದಲ್ಲಿ ಕೈಗೊಂಡಿರುವ ವಸತಿ ಯೋಜನೆಗಳನ್ನು ಹೆಸರಿಸಿ.

- ❖ ಇಂದಿರಾ ಆವಾಸ್ ಯೋಜನೆ
- ❖ ಅಂಬೇಡ್ಕರ್-ವಾಲ್ಮೀಕಿ ವಸತಿ ಯೋಜನೆ
- ❖ ಆಶ್ರಯ ಯೋಜನೆ

24. ಗ್ರಾಹಕ ರಕ್ಷಣಾ ಕಾಯ್ದೆಯ ಮುಖ್ಯ ಉದ್ದೇಶಗಳೇನು?

- ❖ ಸುರಕ್ಷತೆ ಹಾಗೂ ಗುಣಮಟ್ಟಕ್ಕೆ ಮೊದಲ ಪ್ರಾಶಸ್ತ್ಯ ನೀಡುವುದು
- ❖ ಅಪಾಯಕಾರಿ ವಸ್ತುಗಳ ತಯಾರಿಕೆ ಮತ್ತು ಮಾರಾಟವನ್ನು ತಪ್ಪಿಸುವುದು.
- ❖ ಮಾರುಕಟ್ಟೆಯಲ್ಲಿ ನಡೆಯಬಹುದಾದ ಅನುಚಿತ ವ್ಯವಹಾರ ಪದ್ಧತಿಗಳನ್ನು ತಡೆಗಟ್ಟುವುದು
- ❖ ಗುಣಮಟ್ಟ, ಅಳತೆ, ತೂಕ, ಬೆಲೆ ಇತ್ಯಾದಿಗಳ ಮೇಲೆ ನಿಗಾವಹಿಸುವುದು
- ❖ ಬಳಕೆದಾರರು ತಾವು ಖರೀದಿಸುವ ವಸ್ತು ಅಥವಾ ಸೇವೆಗಳಿಂದ ತೊಂದರೆಗೆ ಒಳಗಾದಲ್ಲಿ ಅವರಿಗೆ ಸೂಕ್ತ ಪರಿಹಾರ ಕೊಡಿಸುವುದು.

## IV ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಮೂರರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿರಿ. 9x3=27

25. ರಾಜಾ ಮಾರ್ತಾಂಡವರ್ಮನು ತನ್ನ ರಾಜ್ಯವನ್ನು ಹೇಗೆ ಬಲಿಷ್ಠ ಹಾಗೂ ಪ್ರಾಬಲ್ಯಗೊಳಿಸಿದನೆಂದು ವಿವರಿಸಿ.

- ❖ 1729-1758ರಲ್ಲಿ ವೈನಾಡನ್ನು ಆಳ್ವಿಕೆ ಮಾಡಿದ ಮಾರ್ತಾಂಡ ವರ್ಮ ಪರಕೀಯರಾದ ಡಚ್ಚರಿಂದ ರಾಜ್ಯವನ್ನು ರಕ್ಷಿಸಿದ.
- ❖ ರಾಜಧಾನಿಯನ್ನು ಪದ್ಮನಾಭಪುರದಿಂದ ತಿರುವನಂತಪುರಕ್ಕೆ ಸ್ಥಳಾಂತರಿಸಿದ
- ❖ ತನ್ನ ಸಂಸ್ಥಾನವನ್ನು ವಿಶ್ವ ತಿರುವಾಂಕೂರು ಸಂಸ್ಥಾನ ಎಂದು ಹೆಸರಾಗುವಂತೆ ಮಾಡಿದ.
- ❖ ಈ ಸಂಸ್ಥಾನದ ಕೊಚ್ಚಿ ವಿಶ್ವದ ಪ್ರಮುಖ ಸಾಂಬಾರ ಪದಾರ್ಥಗಳ ಕೇಂದ್ರವಾಗಿತ್ತು

❖ ವೈನಾಡು ಸಂಸ್ಥಾನದ ಗಡಿ ವಿಸ್ತರಿಸಲು 50 ಸಾವಿರ ಸೈನಿಕರ ಸೈನ್ಯ ಕಟ್ಟಿ ಮೆಣಸು ಬೆಳೆಯುವ ಪ್ರದೇಶಗಳನ್ನು ಕೈ ವಶ ಮಾಡಿಕೊಂಡನು.

❖ ಕಾಯಂಕುಳಂ, ಕೊಚ್ಚಿ, ಪುರಕ್ಕಾಡ್ ಮತ್ತು ವಡಕ್ಕುಂಕೂರ್ ಸಂಸ್ಥಾನಗಳ ಜೊತೆಗೂಡಿ ಡಚ್ ಸೇನೆಯು ತಿರುವಾಂಕೂರಿನ ಮೇಲೆ ಆಕ್ರಮಣ ಮಾಡಿದಾಗ ಮಾರ್ತಾಂಡ ವರ್ಮನ ಸೈನ್ಯ ಅವರನು ಸೋಲಿಸಿ ನೆಡುಮಂಗಡ ಮತ್ತು ಕೊಟ್ಟಾರಕರ ಗಳನ್ನು ವಶಪಡಿಸಿಕೊಂಡಿತು

❖ 1741 ರಲ್ಲಿ ಡಚ್ಚರು ತಿರುವಾಂಕೂರಿನ ಮೇಲೆ ದಾಳಿ ಮಾಡಿದಾಗ, ಅದನ್ನು ಸಮರ್ಥವಾಗಿ ಹಿಮ್ಮೆಟ್ಟಿಸಿದ

**ಅಥವಾ**

ವೆಲ್ಲೆಸ್ಲಿಯು ಭಾರತೀಯ ಅರಸರನ್ನು ತಮ್ಮ ಹಿಡಿತಕ್ಕೆ ಹೇಗೆ ತಂದನೆಂದು ವಿವರಿಸಿ.

❖ ಸಹಾಯಕ ಸೈನ್ಯ ಪದ್ಧತಿ, ಹೊಸ ರಾಜ್ಯಗಳ ಮೇಲೆ ಯುದ್ಧ, ಹಾಗೂ ಈಗಾಗಲೇ ಕಂಪನಿಯ ಅಧೀನಕ್ಕೆ ಒಳಪಟ್ಟಿರುವ ರಾಜ್ಯಗಳನ್ನು ನೇರ ನಿಯಂತ್ರಣಕ್ಕೆ ಒಳಪಡಿಸುವುದು. ಈ ಮೂರು ವಿಧಾನಗಳ ಮೂಲಕ ಭಾರತೀಯ ಅರಸರನ್ನು ಹಿಡಿತಕ್ಕೆ ತಗೆದು ಕೊಂಡನು.

❖ 1798 ರಲ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದನು. ಇದರ ನಿಬಂಧನೆಗಳು ಈ ರೀತಿ ಇವೆ.

❖ ಭಾರತೀಯ ರಾಜರು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.

❖ ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಅಥವಾ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.

❖ ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು

❖ ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನ ನೇಮಿಸಿಕೊಳ್ಳುವಂತಿಲ್ಲ

26. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಸಾಧನೆಗಳೇನು?

❖ ಪ್ರಾಥಮಿಕ ಶಿಕ್ಷಣದ ಶಿಕ್ಷಣ ಶುಲ್ಕ ರದ್ದು

❖ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ನೆರವು

❖ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ

❖ ವಿದೇಶ ವಿದ್ಯಾಭ್ಯಾಸಕ್ಕೆ ಹೋಗುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ

❖ 1905 ರಲ್ಲಿ ಟಾಟಾರವರ ಬೆಂಬಲದಿಂದ ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ಸ್ಥಾಪನೆ

❖ ಬೆಳಗೂಳದ ಬಳಿ ಕಾವೇರಿ ನದಿಗೆ ಅಣೆಕಟ್ಟು ನಿರ್ಮಾಣ

❖ ಭದ್ರಾವತಿಯಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ, ಕಾಗದ ಕಾರ್ಖಾನೆ ನಿರ್ಮಾಣ.

❖ ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ, ಮೈಸೂರಿನಲ್ಲಿ ಗಂಧದ ಎಣ್ಣೆ ಕಾರ್ಖಾನೆ, ಬೆಂಗಳೂರಿನಲ್ಲಿ ಸಾಬೂನು ಕಾರ್ಖಾನೆ ಸ್ಥಾಪನೆ

❖ ನ್ಯಾಯ ವಿಧಾಯಕ ಸಭೆ ರಚನೆ.

27. 'ಸ್ವಾತಂತ್ರ್ಯದ ಸಮಯದಲ್ಲಿ ಭಾರತದ ವಿಭಜನೆ ಅನಿವಾರ್ಯವಾಗಿತ್ತು', ಸ್ಪಷ್ಟಿಕರಿಸಿ.

❖ 1937 ರಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಸಮ್ಮಿಶ್ರ ಸರ್ಕಾರವನ್ನು ರೂಪಿಸಲು ವಿಫಲವಾದಗ ಜಿನ್ನಾ ಮತ್ತು ಕಾಂಗ್ರೆಸ್ ನಡುವೆ ಸಂಬಂಧ ಹದಗೆಟ್ಟು, ಪಾಕಿಸ್ತಾನದ ಬೇಡಿಕೆಯನ್ನು ತೀವ್ರಗೊಳಿಸಿದರು.

❖ 1940 ರಲ್ಲಿ ನಡೆದ ಮುಸ್ಲಿಂ ಲೀಗ್‌ನ ಲಾಹೋರ್ ಅಧಿವೇಶನದಲ್ಲಿ ಜಿನ್ನಾ ಹಿಂದೂ ಮತ್ತು ಮುಸ್ಲಿಮರು ಒಂದು ದೇಶವಾಗಿರಲು ಸಾಧ್ಯವೇ ಇಲ್ಲ ಎಂದು ಘೋಷಿಸಿದರು.

❖ ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರಕ್ಕಾಗಿ 1946ರ ಆಗಸ್ಟ್ 16ರಂದು ನೇರ ಕಾರ್ಯಚರಣೆ ದಿನಕ್ಕೆ ಮುಸ್ಲಿಂ ಲೀಗ್ ಕರೆ ನೀಡಿತು.

❖ ಆಗ ದೇಶಾದ್ಯಂತ ಕೋಮುಗಲಭೆಗಳು ನಡೆದವು. ಬಂಗಾಳದಲ್ಲಿ 48 ಗಂಟೆ ಅವಧಿಯಲ್ಲಿ ಸಾವಿರಾರು ಹಿಂದೂಗಳನ್ನು ಮೂಲಭೂತವಾದಿ ಮುಸ್ಲಿಂರು ಕೊಂದರು

❖ ವೈಸ್‌ರಾಯ್ ಮೌಂಟ್ ಬ್ಯಾಟನ್ ಗಾಂಧೀಜಿ ಮತ್ತು ಜಿನ್ನಾರೊಂದಿಗೆ ಮಾತುಕತೆ ನಡೆಸಿ ಭಾರತ ವಿಭಜಿಸುವ ಯೋಜನೆಯನ್ನು ರೂಪಿಸಿದರು.

28. ವಿಶ್ವ ಸಂಸ್ಥೆಯ ಗುರಿಗಳು ಮತ್ತು ಉದ್ದೇಶಗಳೇನು?

• ಅಂತರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆ ಕಾಪಾಡುವುದು

- ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು
- ಮಾನವನ ಮೂಲಭೂತ ಹಕ್ಕುಗಳ ಬಗೆಗೆ ನಂಬುಗೆಯನ್ನು ಹೆಚ್ಚಿಸುವುದು
- ಅಂತರಾಷ್ಟ್ರೀಯ ಮಟ್ಟದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಥವಾ ಮಾನವೀಯ ನೆಲೆಯ ಸಮಸ್ಯೆಗಳಿಗೆ ಅಂತರಾಷ್ಟ್ರೀಯ ಸಹಕಾರದೊಂದಿಗೆ ಪರಿಹಾರ ಕಂಡು ಕೊಳ್ಳುವುದು
- ಅಂತರಾಷ್ಟ್ರೀಯ ಮಟ್ಟದ ನ್ಯಾಯ ಹಾಗೂ ಒಡಂಬಡಿಕೆಗಳ ಷರತ್ತುಗಳಿಗೆ ಮನ್ನಣೆ ಒದಗಿಸುವುದು
- ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು.

29. ನಿರುದ್ಯೋಗ ಸಮಸ್ಯೆಯನ್ನು ಎದುರಿಸಲು ಸರ್ಕಾರ ಕೈಗೊಂಡಿರುವ ಯೋಜನೆಗಳೇನು?

- ➢ ಜನಸಂಖ್ಯಾ ನಿಯಂತ್ರಣ ಕ್ರಮಗಳು
- ➢ ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ
- ➢ ಕೃಷಿ ಕ್ಷೇತ್ರದ ಅಭಿವೃದ್ಧಿ
- ➢ ಶೈಕ್ಷಣಿಕ ಸುಧಾರಣಾ ಯೋಜನೆಗಳು
- ➢ ಪಂಚವಾರ್ಷಿಕ ಯೋಜನೆಗಳು
- ➢ ವೃತ್ತಿಪರ ಶಿಕ್ಷಣಕ್ಕೆ ಪ್ರೋತ್ಸಾಹ
- ➢ ಗ್ರಾಮೀಣಾಭಿವೃದ್ಧಿ ಯೋಜನೆಗಳು
- ➢ ಉದ್ಯೋಗ ಖಾತರಿ ಯೋಜನೆಗಳು

30. ಭಾರತದ ಮೇರೆಗಳು ಮತ್ತು ನೆರೆದೇಶಗಳ ಬಗ್ಗೆ ಬರೆಯಿರಿ.

*ಭಾರತದ ಮೇರೆಗಳು*

- ❖ ಭಾರತವು ಒಂದು ಪರ್ಯಾಯ ದ್ವೀಪವಾಗಿದ್ದು ಭೂ ಮತ್ತು ಜಲ ಮೇರೆಗಳನ್ನು ಹೊಂದಿದೆ
- ❖ ಭೂ ಮೇರೆ(ಗಡಿ) 15,200 ಕಿ ಮೀ, ಮತ್ತು ಜಲ ಮೇರೆ(ಗಡಿ) 6,100 ಕಿ. ಮೀ ಇದೆ.

*ಭಾರತದ ನೆರೆಯ ದೇಶಗಳು*

- ವಾಯವ್ಯದಲ್ಲಿ- ಪಾಕಿಸ್ತಾನ, ಮತ್ತು ಅಪ್ಘಾನಿಸ್ತಾನ.
- ಉತರದಲ್ಲಿ- ನೇಪಾಳ, ಭೂತನ್ ಮತ್ತು ಚೀನ
- ಪೂರ್ವಕ್ಕೆ- ಬಾಂಗ್ಲಾದೇಶ, ಮತ್ತು ಮೈಯನ್ಮಾರ್
- ದಕ್ಷಿಣಕ್ಕೆ- ಶ್ರೀಲಂಕ
- ನೈರುತ್ಯಕ್ಕೆ- ಮಾಲ್ಡೀವ್ಸ್

31. ಕಾಡುಗಳ ಸಂರಕ್ಷಣೆ ಅತ್ಯವಶ್ಯಕವಾಗಿದೆ. ಏಕೆ?

ಭಾರತದಲ್ಲಿ ಅರಣ್ಯಗಳ ಕ್ಷೇತ್ರವು ನಿರಂತರವಾಗಿ ಇಳಿಮುಖವಾಗುತ್ತಿದೆ. ವ್ಯವಸಾಯದ ವಿಸ್ತರಣೆ, ಹೈನುಗಾರಿಕೆ, ರಸ್ತೆಗಳು, ರೈಲುಮಾರ್ಗಗಳು, ನೀರಾವರಿ ಯೋಜನೆಗಳ ನಿರ್ಮಾಣ, ಕಾಡ್ಗಿಚ್ಚು, ಗಣಿಗಾರಿಕೆ ಮುಂತಾದವುಗಳು ಅರಣ್ಯ ನಾಶಕ್ಕೆ ಮುಖ್ಯ ಕಾರಣವಾಗಿವೆ ಆದ್ದರಿಂದಾಗಿ ಅರಣ್ಯಗಳನ್ನು ಸಂರಕ್ಷಿಸಬೇಕಾದುದು ಅತ್ಯಂತ ಮುಖ್ಯವಾಗಿದೆ.

**ಅಥವಾ**

ಬೆಳೆಯ ಮಾದರಿಗಳು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತದೆ. ಏಕೆ?

- ➢ *ನೈಸರ್ಗಿಕ ಅಂಶಗಳು:-* ಭೂಸ್ವರೂಪ, ವಾಯುಗುಣ, ಮಳೆ
- ➢ *ಆರ್ಥಿಕ ಅಂಶಗಳು:-* ವಿಶಾಲ ಹಿಡುವಳಿ ಹೊಂದಿರುವ ಪ್ರದೇಶಗಳಲ್ಲಿ ಹೆಚ್ಚು ಬೆಲೆಕೊಡುವ ವಾಣಿಜ್ಯ ಉತ್ಪನ್ನಗಳನ್ನು ಬೆಳೆಯಲಾಗುತ್ತದೆ. ಇದರ ಮುಖ್ಯ ಉದ್ದೇಶ ಹೆಚ್ಚು ಆರ್ಥಿಕ ಲಾಭ ಪಡೆಯುವುದಾಗಿದೆ
- ➢ *ಸಾಮಾಜಿಕ ಅಂಶಗಳು:-*ಸಂಪ್ರದಾಯ, ಮೂಢನಂಬಿಕೆ, ಅನಕ್ಷರತೆ ಮುಂತಾದ ಅಂಶಗಳು ಬೆಳೆ ಮಾದರಿಯನ್ನು ನಿರ್ಧರಿಸುತ್ತವೆ.
- ➢ *ರೈತರ ಮನೋಭಾವ:-* ರೈತರ ಧೋರಣೆ ಪ್ರಮುಖ ಪಾತ್ರ ವಹಿಸುತ್ತದೆ.

- ನೀರಿನ ಪೂರೈಕೆ, ಸಾರಿಗೆ ಸಂಪರ್ಕ, ಮಾರುಕಟ್ಟೆ, ಸುಧಾರಿತ ತಳಿಗಳು, ರಾಸಾಯನಿಕ ಗೊಬ್ಬರ, ಭೂ ಸುಧಾರಣೆ ಸಹ ಬೆಳೆ ಮಾದರಿ ಮೇಲೆ ಪ್ರಭಾವ ಬೀರುತ್ತವೆ.

32. ಭಾರತದಲ್ಲಿ ವಿಕೇಂದ್ರೀಕರಣದ ಜಾರಿಗಾಗಿ ಕೈಗೊಂಡ ಕ್ರಮಗಳೇನು?

- ವಿಕೇಂದ್ರೀಕರಣದ ಜಾರಿಗಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.
- 1993 ರ ಸಂವಿಧಾನದ 73 ನೇ ತಿದ್ದುಪಡಿಯ ಮೂಲಕ ದೇಶದಾದ್ಯಂತ್ಯ ಏಕ ರೂಪದ ಪಂಚಾಯತ್ ಸಂಸ್ಥೆಗಳನ್ನು ಜಾರಿಗೆ ತರಲಾಗಿದೆ
- ಪಂಚಾಯತ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ನೀಡಲಾಗಿದೆ.
- ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಮತ್ತು ಜಿಲ್ಲಾ ಪಂಚಾಯ್ತಿ ಎಂಬ ಮೂರು ಹಂತದ ಪಂಚಾಯತ್ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತರಲಾಗಿದೆ

**ಅಥವಾ**

ಹಸಿರು ಕ್ರಾಂತಿ ಉಂಟು ಮಾಡಲು ಕೈಗೊಂಡ ಕ್ರಮಗಳೇನು?

- 1966ರಲ್ಲಿ ಗೋಧಿಯ ಹೆಚ್ಚು ಇಳುವರಿ ಬೀಜಗಳನ್ನು ಬಳಕೆಗೆ ತರಲಾಯಿತು
- ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳ ಬಳಕೆ
- ನೀರಾವರಿ ಸೌಲಭ್ಯಗಳ ವಿಸ್ತರಣೆ
- ಸುಗ್ಗಿ ಪೂರ್ವ ಮತ್ತು ಸುಗ್ಗಿ ನಂತರದ ತಂತ್ರಜ್ಞಾನದ ಬಳಕೆ
- ಸಣ್ಣ ಮತ್ತು ಬಡ ರೈತರಿಗೆ ಸುಧಾರಿತ ತಂತ್ರಜ್ಞಾನ ದೊರೆಯುವಂತೆ ಮಾಡಲು ಸರಕಾರವು "ಸಹಾಯ ಧನ" ವ್ಯವಸ್ಥೆಯನ್ನು ಜಾರಿಗೊಳಿಸಿದೆ.
- ಬೀಜ, ಗೊಬ್ಬರ, ಕ್ರಿಮಿನಾಶಕ ಯಂತ್ರೋಪಕರಣ ಗಳನ್ನು ಕಡಿಮೆ ಬೆಲೆಗೆ ವಿತರಿಸಲಾಗಿದೆ.
- ರೈತರಿಗೆ ಬ್ಯಾಂಕುಗಳು ಮತ್ತು ಸಹಕಾರಿ ಸಂಘಗಳ ಮೂಲಕ ಕಡಿಮೆ ಬಡ್ಡಿದರದಲ್ಲಿ ಸಾಲ ಒದಗಿಸಲಾಗಿದೆ

33. ಬ್ಯಾಂಕುಗಳ ಕಾರ್ಯಗಳಾವುವು?

- ಸಾರ್ವಜನಿಕರಿಂದ ಅಥವಾ ಇತರರಿಂದ ಠೇವಣಿಗಳನ್ನು ಅಂಗೀಕರಿಸುತ್ತದೆ.
- ಸಾರ್ವಜನಿಕರಿಗೆ ಮತ್ತು ಸಂಘ ಸಂಸ್ಥೆಗಳಿಗೆ ಸಾಲಗಳನ್ನು ಕೊಡುವುದು
- ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವುದು
- ಚೆಕ್ಕು ಮತ್ತು ಹುಂಡಿಗಳ ಮೇಲೆ ಹಣ ವಸೂಲು ಮಾಡುವುದು
- ಹುಂಡಿಗಳನ್ನು ಸೋಡಿ ಮಾಡುವುದು
- ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು
- ವಿದೇಶಿ ವಿನಿಮಯದ ವ್ಯವಹಾರಗಳನ್ನು ನಿರ್ವಹಿಸುವುದು
- ಬೆಲೆ ಬಾಳುವ ವಸ್ತುಗಳನ್ನು ತಮ್ಮ ಸುಪರ್ದಿಯಲ್ಲಿ ಭದ್ರವಾಗಿ ಇಟ್ಟುಕೊಳ್ಳುವುದು
- ಸಾಲಪತ್ರಗಳನ್ನು ಮತ್ತು ಜವಾಬ್ದಾರಿ ಪತ್ರಗಳನ್ನು ಕೊಡುವುದು

**ಅಥವಾ**

ಉದ್ಯಮಗಾರನ ಗುಣಲಕ್ಷಣಗಳೇನು?

- ಸೃತಜನಾತ್ಮಕ
- ನಾಯಕತ್ವ
- ಕ್ರಿಯಾತ್ಮಕ
- ಪ್ರಚೋದನೆಯ ಸಾಧನೆ

- ಸಮಸ್ಯೆಯ ಪರಿಹಾರ
- ನಷ್ಟಭರಿತಕ್ಕೆ ಸಿದ್ಧ
- ವಚನಬದ್ಧತೆ
- ಹೊಸ ಪದ್ಧತಿಯನ್ನು ರೂಡಿಗೆ ತರುವುದು
- ಗುರಿ ಮುಟ್ಟುವಿಕೆ
- ಆತ್ಮ ವಿಶ್ವಾಸ

## V ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎಂಟು ವಾಕ್ಯಗಳು ಅಥವಾ ಅಂಶಗಳಲ್ಲಿ ಉತ್ತರಿಸಿರಿ. 4x4=16

34. ದಕ್ಷಿಣ ಭಾರತದಲ್ಲಿ ಆಂಗ್ಲರು ಮತ್ತು ಫ್ರೆಂಚರು ತಮ್ಮ ಪ್ರಾಬಲ್ಯ ಉಳಿಸಿಕೊಳ್ಳಲು ಮಾಡಿದ ಹೋರಾಟವನ್ನು ವಿವರಿಸಿ.

- ❖ 18ನೇ ಶತಮಾನದ ಮಧ್ಯಂತರದಲ್ಲಿ ದಕ್ಷಿಣ ಭಾರತದ ರಾಜಕೀಯ ಅಸ್ಥಿರತೆಯ ಲಾಭ ಪಡೆಯಲು ಫ್ರೆಂಚರು ಮತ್ತು ಬ್ರಿಟಿಷರ ನಡುವೆ ಪೈಪೋಟಿ ಉಂಟಾಯಿತು
- ❖ ಮೂರು ಕರ್ನಾಟಿಕ್ ಯುದ್ಧಗಳು ಫ್ರೆಂಚ್ ಮತ್ತು ಬ್ರಿಟಿಷರ ನಡುವೆ ನಡೆದವು
- ❖ ಮೊದಲನೇ ಕರ್ನಾಟಿಕ್ ಯುದ್ಧ 1946-48 ರಲ್ಲಿ ನಡೆದು ಫ್ರೆಂಚ್‌ರ ಡೂಪ್ಲೆ ಮದ್ರಾಸ್ ವಿಫಲ ಪ್ರಯತ್ನ ನಡೆಸಿದನು, ಈ ಯುದ್ಧ ಏಕ್ಸ-ಲಾ-ಚಾಪೆಲ್ ಒಪ್ಪಂದದೊಂದಿಗೆ ಮುಕ್ತಾಯವಾಯಿತು
- ❖ 2ನೇ ಕರ್ನಾಟಿಕ್ ಯುದ್ಧ 1749-1954 ರಲ್ಲಿ ಹೈದರಾಬಾದ್ ಮತ್ತು ಆರ್ಕಾಟಿನಲ್ಲಿ ನಡೆದು ಪಾಂಡಿಚೇರಿ ಒಪ್ಪಂದದೊಂದಿಗೆ ಮುಕ್ತಾಯವಾಯಿತು. ಈ ಯುದ್ಧ ಫ್ರೆಂಚರಿಗೆ ಹಿನ್ನಡೆಯನ್ನು ಮತ್ತು ಬ್ರಿಟಿಷರಿಗೆ ಪ್ರತಿಷ್ಠೆಯನ್ನು ತಂದು ಕೊಟ್ಟಿತು.
- ❖ 3 ನೇ ಕರ್ನಾಟಿಕ್ ಯುದ್ಧದಲ್ಲಿ ಫ್ರೆಂಚರ ಕೌಂಟ್ ಡಿ ಲಾಲಿ 1960 ರಲ್ಲಿ ವಾಂಡಿವಾಷ್ ಕೋಟೆಗೆ ಮುತ್ತಿಗೆ ಹಾಕಿ ಬ್ರಿಟಿಷರ ಐರ್‌ಕೂಟನಿಂದ ಸೋಲು ಕಂಡನು 1763 ರಲ್ಲಿ ಪ್ಯಾರಿಸ್ ಒಪ್ಪಂದವಾಗಿ ಫ್ರೆಂಚರಿಗೆ ಪಾಂಡಿಚೇರಿಯನ್ನು ಹಿಂತಿರುಗಿಸಲಾಯಿತು.

35. ಭಾರತದಲ್ಲಿ ಬ್ರಿಟೀಷ್ ಶಿಕ್ಷಣ ಪದ್ಧತಿಯಿಂದಾದ ಪರಿಣಾಮಗಳೇನು?

- ▪ ಭಾರತೀಯರು ಆಧುನಿಕತೆ, ಜಾತ್ಯಾತೀತತೆ, ಪ್ರಜಾಪ್ರಭುತ್ವ, ವೈಜ್ಞಾನಿಕ ಆಲೋಚನಾ ಕ್ರಮದ ಜೊತೆಗೆ ರಾಷ್ಟ್ರೀಯವಾದಿ ದೃಷ್ಟಿಕೋನಗಳನ್ನು ಬೆಳೆಸಿಕೊಂಡರು .
- ▪ ಸ್ಥಳೀಯ ಭಾಷೆ ಮತ್ತು ಸಾಹಿತ್ಯ ರಚನೆಗಳಿಗೆ ಪ್ರೋತ್ಸಾಹ ದೊರೆಯಿತು. ಹಾಗೂ ವಿದ್ಯಾವಂತ ವರ್ಗದ ಆಲೋಚನಾ ಕ್ರಮದಲ್ಲೂ ಏಕತೆ ಬೆಳೆಯಿತು
- ▪ ವೃತ್ತ ಪತ್ರಿಕೆಗಳು ಬೆಳೆಯ ತೊಡಗಿದವು. ಹಾಗೂ ಅವು ಸರ್ಕಾರದ ನೀತಿಗಳನ್ನು ವಿಮರ್ಶಿಸುವ ಮೂಲಕ ಭಾರತೀಯರಲ್ಲಿ ಬ್ರಿಟಿಷ್ ಸರ್ಕಾರದ ಬಗ್ಗೆ ವಿಮರ್ಶಾತ್ಮಕ ಅಭಿಪ್ರಾಯ ಬೆಳೆಸಿದವು
- ▪ ಹೊಸ ಸಾಮಾಜಿಕ ಮತ್ತು ಧಾರ್ಮಿಕ ಚಳವಳಿಗಳು ಹುಟ್ಟಿಕೊಂಡವು.
- ▪ ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಗಳ ಪ್ರಭಾವ ಭಾರತೀಯರ ಮೇಲೂ ಆಯಿತು.
- ▪ ಭಾರತೀಯರು ತಮ್ಮ ಸಾಂಸ್ಕೃತಿಕ ಪರಂಪರೆಗಳನ್ನು ಅರಿತುಕೊಳ್ಳಲು ಸಾಧ್ಯವಾಯಿತು
- ▪ ಜೆ.ಎಸ್.ಮಿಲ್, ರೂಸೋ, ಮಾಂಟೆಸ್ಕ್ಯೂ, ಮುಂತಾದವರ ಚಿಂತನೆಗಳು ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವಿನ್ಯತೆಯನ್ನು ತಂದವು.

ಅಥವಾ

ಭಾರತದಲ್ಲಿ ಬ್ರಿಟೀಷರ ಭೂ ಕಂದಾಯ ಪದ್ಧತಿಯಿಂದಾದ ಪರಿಣಾಮಗಳೇನು?

- ▪ ರೈತರನ್ನು ಶೋಷಿಸುವ ಹೊಸ ಜಮೀನ್ದಾರಿ ಸಮುದಾಯ ಸೃಷ್ಟಿಯಾಯಿತು.
- ▪ ಜಮಿನ್ದಾರರ ಶೋಷಣೆಗೆ ಒಳಗಾದ ರೈತರು ಅನೇಕ ಸಂಕಷ್ಟಗಳಿಗೆ ಒಳಗಾದರು ನಂತರ ನಿರ್ಗತಿಕರಾದರು

- ಭೂಮಿ ಮಾರಾಟದ ವಸ್ತುವಾಯಿತು ಹಾಗೂ ಭೂಮಿಯನ್ನು ಪರಭಾರೆ ಮಾಡಿ ಹಣವನ್ನು ಸಾಲವಾಗಿ ಪಡೆಯಬಹುದಾಗಿತ್ತು
- ಅನೇಕ ಜಮೀನ್ದಾರರು ಕೂಡ ಕಂದಾಯವನ್ನು ಸಲ್ಲಿಸುವ ಸಲುವಾಗಿ ತಮ್ಮ ಜಮೀನನ್ನು ಪರಭಾರೆ ಮಾಡಿದರು.
- ಕೃಷಿ ಕ್ಷೇತ್ರ ವಾಣಿಜ್ಯೀಕರಣಗೊಂಡು, ಇಂಗ್ಲೆಂಡಿನಲ್ಲಾದ ಕೈಗಾರಿಕೀಕರಣದಿಂದ ಅಲ್ಲಿನ ಕೈಗಾರಿಕೆಗಳಿಗೆ ಬೇಡಿದ ಕಚ್ಚಾವಸ್ತುಗಳನ್ನೆ ಬೆಳೆಯಬೇಕಾಯಿತು
- ಹಣದ ಲೇವಾದೇವಿಗಾರರು ಬಲಿಷ್ಠರಾಗತೊಡಗಿದರು.

36. ಭಾರತದಲ್ಲಿ ಸ್ತ್ರೀಯರ ಸ್ಥಾನಮಾನ ಉತ್ತಮ ಪಡಿಸಲು ಕೈಗೊಂಡಿರುವ ಕ್ರಮಗಳೇನು?

✓ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಆರಂಭ, ಇದರ ಮೂಲಕ ಮಹಿಳಾ ಶಿಕ್ಷಣಕ್ಕೆ, ಆರೋಗ್ಯಕ್ಕೆ, ಹೆಚ್ಚು ಹೊತ್ತು ನೀಡಿ, ಸಾಮಾಜಿಕ ಸ್ಥಾನಮಾನ ಸುಧಾರಿಸ ಲಾಗುತ್ತಿದೆ.

✓ ಬಾಲ್ಯ ವಿವಾಹ ನಿಷೇಧ, ವರದಕ್ಷಿಣೆ ನಿಷೇಧ, ಕಾಯ್ದೆಗಳ ಜಾರಿ ಮಾಡಲಾಗಿದೆ.

✓ ಗ್ರಾಮೀಣ ಮಹಿಳೆಯರ ವಿಕಾಸಕ್ಕೆ ಸ್ತ್ರೀಶಕ್ತಿ ಯೋಜನೆ ಜಾರಿ

✓ ಸ್ವ- ಉದ್ಯೋಗ ಸ್ವಾವಲಂಬನೆಗೆ ಸ್ವ-ಸಹಾಯ ಸಂಘಗಳ ಸ್ಥಾಪನೆ.

✓ ಮಹಿಳೆಯರ ಸ್ವ-ಉದ್ಯೋಗಕ್ಕಾಗಿ ಸಾಲ ಸೌಲಭ್ಯ ಮತ್ತು ಸಬ್ಸಿಡಿ ನೀಡುವುದು

✓ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ರಕ್ಷಣೆಗಾಗಿ ಮಹಿಳಾ ಆಯೋಗಗಳ ಸ್ಥಾಪನೆ ಇವುಗಳ ಮೂಲಕ ಮಹಿಳೆಯರ ದೂರು-ದುಮ್ಮಾನಗಳನ್ನು ಪರಿಶೀಲಿಸಿ ನ್ಯಾಯ ಒದಗಿಸ ಲಾಗುತ್ತಿದೆ.

✓ ರಾಜಕೀಯ ಹಾಗೂ ಔದ್ಯೋಗಿಕ ಕ್ಷೇತ್ರದಲ್ಲಿ ಮೀಸಲಾತಿ ನಿಗದಿ.

✓ ಕರ್ನಾಟಕದ ಸ್ಥಳೀಯ ಸಂಸ್ಥೆಗಳಲ್ಲಿ ಶೇ 33ರಷ್ಟು ಮಹಿಳಾ ಮೀಸಲಾತಿ ನೀಡಲಾಗಿದೆ.

37. ಕಪ್ಪು ಮಣ್ಣು, ಜಂಬಿಟ್ಟಿಗೆ ಮಣ್ಣಿಗಿಂತ ಹೇಗೆ ಭಿನ್ನವಾಗಿದೆ?

| ಕಪ್ಪು ಮಣ್ಣು | ಜಂಬಿಟ್ಟಿಗೆ ಮಣ್ಣು |
|---|---|
| • ರೇಗೂರ್ ಮಣ್ಣು ಎಂದು ಕರೆಯುವರು<br>• ಇದು ಅಗ್ನಿ ಶಿಲೆಗಳ ಶಿಥಿಲೀಕಣದಿಂದ ಉತ್ಪತ್ತಿಯಾಗಿದೆ.<br>• ಕಪ್ಪು ಬಣ್ಣ ಹೊಂದಿದೆ, ಈ ಮಣ್ಣು ಫಲವತ್ತಾಗಿದ್ದು, ಜೇಡಿ ಮಣ್ಣಿನ ಕಣಗಳನ್ನು ಹೊಂದಿದ್ದು, ತೇವಾಂಶವನ್ನು ಹಿಡಿದಿಟ್ಟುಕೊಳ್ಳವ ಸಾಮರ್ಥ್ಯ ಹೊಂದಿದೆ.<br>• ಕಬ್ಬಿಣ ಹಾಗೂ ಮೆಗ್ನೇಶಿಯಂ ಕಾರ್ಬೋನೇಟ್‌ಗಳನ್ನು ಅಧಿಕ ಪ್ರಮಾಣದಲ್ಲಿ ಹೊಂದಿದ್ದು, ಒಣಬೇಸಾಯಕ್ಕೆ ಸೂಕ್ತವಾಗಿದೆ.<br>• ಒಣ ಬೇಸಾಯಕ್ಕೆ ಸೂಕ್ತವಾಗಿದೆ.<br>• ಹತ್ತಿ ಜೋಳ ಗೋಧಿ ಈರುಳ್ಳಿ, ಮೆಣಸಿನಕಾಯಿ ನಿಂಬೆ, ಬೆಳೆಗೆ ಸೂಕ್ತವಾಗಿದೆ | • ಲ್ಯಾಟ್‌ರೈಟ್ ಮಣ್ಣು ಎಂದೂ ಕರೆಯುವರು<br>• 200 ಸೆಂ ಮೀ ಗಿಂತ ಅಧಿಕ ಮಳೆ ಬೀಳುವ ಪ್ರದೇಶದಲ್ಲಿ ಈ ಮಣ್ಣು ನಿರ್ಮಿತವಾಗಿದೆ<br>• ಅಧಿಕ ಮಳೆಯಿಂದ ಲವಣಾಂಶಗಳು ತೊಳೆಸಲ್ಪಟ್ಟು ಕೇವಲ ಕಬ್ಬಿಣದ ಆಕ್ಸೈಡ್ ಮತ್ತು ಅಲ್ಯುಮಿನಿಯಂಗಳು ಮಾತ್ರ ಮೇಲ್ಪದರದಲ್ಲಿ ಉಳಿಯುತ್ತವೆ. ಆದ್ದರಿಂದ ಕೆಂಪು ಬಣ್ಣ ಹೊಂದಿದೆ<br>• ಫಲವತ್ತತೆ ಅತಿ ಕಡಿಮೆ ಸಾರಜನಕ ಮತ್ತು ಲವಣಗಳ ಕೊರತೆ ಈ ಮಣ್ಣಿನಲ್ಲಿದೆ<br>• ಕಾಫಿ, ಟೀ ಇತ್ಯಾದಿ ತೋಟಗಾರಿಕೆ ಬೆಳೆಗಳಿಗೆ ಸೂಕ್ತವಾಗಿದೆ. |

**VI 38.** ಭಾರತದ ನಕ್ಷೆ ಬರೆದು ಅದರಲ್ಲಿ ಕೆಳಗಿನ ಸ್ಥಳಗಳನ್ನು ಗುರುತಿಸಿರಿ. 1+4=5

a) ಹಟ್ಟಿ ಚಿನ್ನದ ಗಣಿ

b) ಭದ್ರಾವತಿ

c) ಕೊಚ್ಚಿ

d) ಕಲ್ಪಾಕಂ

